ಅಭಿವ್ಯಕ್ತಿಸುವುದಕ್ಕೆ ಮಾತ್ರವೇ ಸೀಮಿತವಲ್ಲ. ಮನುಷ್ಯನ ಬದುಕಿನ ಅನಂತಮುಖಗಳನ್ನು ತೆರೆದಿಡುವ ಒಳನೋಟಗಳಿರುವ ಸಶಕ್ತ ಪ್ರಕಾರವಾಗಿ ನನಗೆ ಕಂಡಿದೆ. ನಿಜ ಹೇಳಬೇಕೆಂದರೆ ನನ್ನನ್ನು ಕತೆಗಾರ, ಕಾದಂಬರಿಕಾರನೆಂದು ಓದುಗರು ಗುರುತಿಸ ಹತ್ತಿದ ಮೇಲೆಯೇ ನಾನು ಹೆಚ್ಚು ಹೆಚ್ಚು ಓದಿಕೊಂಡಿದ್ದು. ಕುವೆಂಪು, ಆಲನಹಳ್ಳಿ ಕೃಷ್ಣ, ಪಿ. ಲಂಕೇಶ್, ದೇವನೂರ ಮಹದೇವ ನನಗೆ ಬೇರೊಂದು ಲೋಕವನ್ನೇ ಕಟ್ಟಿಕೊಟ್ಟರು. ಸಾಮಾಜಿಕ ಅಸಮಾನತೆ ಸೃಷ್ಟಿಸಿದ ಅಪಮಾನ, ಬಡತನದ ಬೇಗೆ, ಕೀಳರಿಮೆಯಿಂದ ಮುಕ್ತನಾಗುವ ಸಲುವಾಗಿಯೇ ನಾನು ಸಾಹಿತ್ಯವನ್ನು ಆಶ್ರಯಿಸಿದೆನೆನಿಸುತ್ತದೆ. ಇನ್ನೂರಕ್ಕೂ ಹೆಚ್ಚು ಕತೆಗಳನ್ನು ಬರೆದರೂ ಕತೆ ಬರೆವ ದಾಹ ಇಂಗಿಲ್ಲ. ಹರವು ದೊಡ್ಡದೆನ್ನಿಸಿದಾಗ ಮಾತ್ರ ಕಾದಂಬರಿಗೆ ಕೈ ಹಾಕಿದ್ದೇನೆ. ಉಳಿದಂತೆ ಈಗಲೂ ನನ್ನ ನೆಚ್ಚಿನ ಪ್ರಕಾರ ಕತೆಗಾರಿಕೆಯೆ. ನನ್ನ ಕತೆ ಕಾದಂಬರಿಗಳು ಚಲನಚಿತ್ರಗಳಾಗಿ ನನಗೆ ಹೆಚ್ಚು ಜನಪ್ರಿಯತೆ ತಂದುಕೊಟ್ಟಿರಬಹುದೇನೋ. ನಾನು ತುಂಬಾ ಬರೆಯುತ್ತೇನೆಂಬ ಅಪವಾದವೂ ಇದೆ. ವೇಣು ಸಿನಿಮಿಯವಾಗಿ ಬರೆಯುತ್ತಾರೆಂಬ ಆಕ್ಷೇಪವೂ ಇದೆ. ಜನಪ್ರಿಯ ಸಾಹಿತಿ ಎಂಬ ಟೀಕೆಯೂ ಉಂಟು. ಎಷ್ಟೋ ಜನ ಬರೆದ ಕತೆ ಕಾದಂಬರಿಗಳನ್ನು ಪೂರಾ ಓದಲಾಗದಿರುವ ನವೀನ ಮಾಧ್ಯಮಗಳ ಯುಗದಲ್ಲೂ ನನ್ನ ಬರಹಗಳನ್ನು ಓದಿದರೆ ಸಿನಿಮಾ ನೋಡಿದಂತಾಗುತ್ತದೆಂದರೆ ನಾನು ಗೆದ್ದಂತಲ್ಲವೆ? ಚಿತ್ರದುರ್ಗದಲ್ಲಿ ಹುಟ್ಟಿ ಬೆಳದಿದ್ದರಿಂದ ಕೋಟೆಕೊತ್ತಲಗಳ ಸ್ನೇಹ, ಪಾಳೇಗಾರರ ಶೌರ್ಯ, ಪರಾಕ್ರಮಗಳ ಬಗ್ಗೆ ಕೇಳಿ ಕೇಳಿ ಐತಿಹಾಸಿಕ ಕಾದಂಬರಿಗಳನ್ನು ಬರೆದದ್ದೂ ಆಕಸ್ಮಿಕವೆ. ಸಿನಿಮಾಗಳಿಗೂ ಧಾರಾವಾಹಿಗಳಿಗೂ ಬರೆಯುತ್ತೇನೆಂದು ಅಂದುಕೊಂಡವನೇನಲ್ಲ. ಅದಾಗಿಯೇ ಅವಕಾಶ ಬಂದಾಗ ಬಿಟ್ಟುಕೊಡದೆ ಸವಾಲಿನಂತೆ ಸ್ವೀಕರಿಸಿದೆ ಬರೆದೆ. ಅಲ್ಲಿನ ಯಶಸ್ಸು ಮತ್ತೆ ಮತ್ತೆ ಬರೆಸುತ್ತಿದೆ. ಇದೆಲ್ಲಾ ತಾತ್ಕಾಲಿಕವೆಂದು ಅರಿತೇ ಸಾಹಿತ್ಯದಿಂದ ದೂರವಾಗಲಿಲ್ಲ, ಸರ್ಕಾರಿ ನೌಕರಿ ಬಿಡಲಿಲ್ಲ. ಎಲ್ಲಾ ಕಡೆ ಉಳಿದು ತಕ್ಕಮಟ್ಟಿಗೆ ಬೆಳೆದೆ, ಬದುಕಿದೆ. ಮೊದಲಿನಿಂದಲೂ ಟೀಕೆಗಳಿಂದಲೇ ಗಟ್ಟಿಯಾದವನು ನಾನು. ಬರೆಯುವವನು ಟೀಕೆಗಳಿಗೆ ಕುಗ್ಗಬಾರದು. ಬರೆಯುತ್ತಾ ಹೋಗಬೇಕು; ಕೃಷಿ ಮಾಡುವ ರೈತನಂತೆ. ಬಿತ್ತಿದ್ದು ಬೆಳೆದು ಒಂದು ದಿನ ಫಲ ನೀಡದಿರದು. ಈ ಮಾತನ್ನು ಹೊಸದಾಗಿ ಬರೆಯುವವರು ಮನದಲ್ಲಿಟ್ಟುಕೊಂಡರೆ ಸಾಕು.

ಅಗ್ರಹಾರದ ನೀತಿ, ಐಟಿಬಿಟಿ ನೀತಿ ಬೇರೆ. ಶ್ರಮಿಕನ ರೀತಿ ಹಸಿದವನ ರೀತಿನೀತಿಗಳೇ ಬೇರೆ. ಆಯಾ ಪರಿಸರದಲ್ಲಿ ಬೆಳೆದವರಿಗೆ ಅವು ಇಷ್ಟವಾಗಬಹುದು. ಯಾವುದೇ ಕತೆ ಶ್ರೇಷ್ಠವಾಗಲಿ ಕನಿಷ್ಠವಾಗಲಿ ಅಲ್ಲ. ಎಲ್ಲಾ ಪ್ರಕಾರಗಳಿಗಿಂತ ಕಥಾ ರಚನೆ ನಿಜಕ್ಕೂ ಕಷ್ಟಕರ. ಏಕೆಂದರೆ ಕತೆಗೊಂದು ಪುಟ ಮಿತಿ ಇದೆ. ಆ ಮಿತಿಯಲ್ಲಿಯೇ ವಸ್ತು ವಿನ್ಯಾಸ, ಪಾತ್ರ, ಘಟನೆ, ಮಿತಸಂಭಾಷಣೆ, ಕುತೂಹಲದ ಆರಂಭ, ಅಂತ್ಯದ ಜೊತೆಗೆ ಚೇತೋಹಾರಿ ನಿರೂಪಣೆಗೆ ನಮ್ಮದೇ ಆದ ಮೋಹಕ ಶೈಲಿಯ ಸೊಬಗನ್ನೂ ಹೊದಿಸಬೇಕು. ವೇಗವಾಗಿ ಓದಿಸಿಕೊಂಡು ಹೋಗುವ ಗುಣ, ಓದಿದ ನಂತರ ವಿಚಾರಕ್ಕೆ ಹಚ್ಚುವ ಸಾಮರ್ಥ್ಯ ಕತೆಯಲ್ಲಿದ್ದರೆ ಚೆಂದವಷ್ಟೇ ಅಲ್ಲ ಅದಕ್ಕೊಂದು ತೂಕ. ನಾನು ಒಂದೇ ಸಿಟ್ಟಿಂಗ್‌ನಲ್ಲಿ ನಾಲ್ಕು ಐದು ಗಂಟೆಗಳಲ್ಲಿ ಕತೆ ಬರೆದು ಮುಗಿಸುತ್ತೇನೆ. ಆದರೆ ಅದನ್ನು ಮತ್ತೆ ಮತ್ತೆ ದಿನ ಬಿಟ್ಟು ದಿನ ಓದಿ, ಅನೇಕ ತಿದ್ದುಪಡಿಗಳನ್ನು ಐದಾರು ಸಲವಾದರೂ ಮಾಡುತ್ತೇನೆ – ಹಾಲನ್ನು ಕುದಿಸಿ ಕುದಿಸಿ ‘ಕೋವಾ’ ಮಾಡಿದಂತೆ. ಆ ಕರಡು ಪ್ರತಿಯನ್ನು ಜಗತ್ತಿನಲ್ಲಿ ನಾನು ಮಾತ್ರವೇ ‘ಫೇರ್‌ಕಾಪಿ’